ಅಸಲು ದಾವೆ ನಂ.15/2021

ಪಿ.ಡಬ್ಲೂಃ 1

ದಿನಾಂಕಃ 14/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಪಿ.ಆರ್. ವಕೀಲರಿಂದ**

1. ವಾದಿ ನನ್ನ ಗಂಡ ಎಂದರೆ ಸರಿ. ಸದರಿಯವರ ಜೊತೆ ದಿನಾಂಕ 29.07.1998 ರಂದು ಮದುವೆಯಾಗಿರುತ್ತದೆ. ನನ್ನ ಮತ್ತು ವಾದಿಯವರ ಮದುವೆಯವ ಮೊದಲೇ ನನ್ನ ಮಾವ ಮೃತಪಟ್ಟಿದ್ದರು. ನಾನು ನ್ಯಾಯಾಲಯಕ್ಕೆ ನನ್ನ ಮತ್ತು ನನ್ನ ಮಗಳಾದ ವಾದಿ 1(ಬಿ) ರವರ ಪರವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ಮಾವನಾದ ನಾರಾಯಣಮೂರ್ತಿ ಮತ್ತು ಅತ್ತೆ ಕಮಲಮ್ಮರವರಿಗೆ ಒಟ್ಟು 6 ಜನ ಹೆಣ್ಣು ಮಕ್ಕಳು 2 ಗಂಡು ಮಕ್ಕಳು. ಸದರಿ 6 ಜನ ಹೆಣ್ಣು ಮಕ್ಕಳು ಈಗಲೂ ಜೀವಂತವಾಗಿ ಇದ್ದಾರೆ. ನಾನು ಎಂ.ಕಾಂ. ಪದವೀದಾರಳಾಗಿರುತ್ತೇನೆ. ನಾನು ದಾವಾ ಶೆಡ್ಯೂಲ್ ಆಸ್ತಿಯನ್ನು ನೋಡಿರುತ್ತೇನೆ. ನಾನು ಕೊನೆಯದಾಗಿ 2001-2002 ನೇ ಸಾಲಿನಲ್ಲಿ ದಾವಾ ಶೆಡ್ಯೂಲ್ ಆಸ್ತಿಯನ್ನು ನೋಡಿರುತ್ತೇನೆ. ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಅಳತೆ ಮತ್ತು ಚೆಕ್ಕು ಬಂದಿಯನ್ನು ಹೇಳಲು ಗೊತ್ತಾಗುವುದಿಲ್ಲ.

2. ಮೊದಲಿಗೆ ಇಂಡಸ್ಟ್ರಿಯಲ್ ಏರಿಯಾ ಸರ್ಕಾರಕ್ಕೆ ಸೇರಿತ್ತು ಎಂದರೆ ಸರಿ. 1981 ರಲ್ಲಿ ನನ್ನ ಮಾವರವರಿಗೆ ದಾವಾ ಶೆಡ್ಯೂಲ್ ಸ್ವತ್ತು ಮಂಜೂರಾಗಿರುತ್ತದೆ. ಸದರಿ ಮಂಜೂರಾತಿ ಪತ್ರ ನನ್ನ ಬಳಿ ಇದೆ ಎಂದರೆ ಸರಿ. ನನ್ನ ಮಾವನವರು ಮೃತಪಟ್ಟ ನಂತರದಲ್ಲಿ ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಕ್ರಯ ಪತ್ರ ನನ್ನ ಅತ್ತೆಯವರ ಹೆಸರಿಗೆ ಆಗಿರುತ್ತದೆ. ಸಾಕ್ಷಿಗೆ ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಮೂಲ ಕ್ರಯ ಪತ್ರವನ್ನು ತೋರಿಸಿದ್ದು ಅದನ್ನು ನೋಡಿ ಒಪ್ಪಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ನನ್ನ ಅತ್ತೆಯಾದ ಕಮಲಮ್ಮರವರು 2005 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅತ್ತೆಯಾದ ಕಮಲಮ್ಮರವರು ಮೃತ ಪಟ್ಟ ನಂತರದಲ್ಲಿ ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಅವರಿಬ್ಬರು 2 ಗಂಡು ಮಕ್ಕಳು ಮತ್ತು 6 ಹೆಣ್ಣು ಮಕ್ಕಳಿಗೆ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ.

3. ನಿಪಿ-20 ವಿಲ್ ನಾಮೆ ಆಗುವ ಸಮಯದಲ್ಲಿ ನಾನು ನನ್ನ ಅತ್ತೆಯವರ ಜೊತೆ ಇರಲಿಲ್ಲ. ನಿಡಿ-1 ದಿನಾಂಕ 08.11.2004 ರಂದು ಆಗಿರುವಂತಹ ಕ್ರಯ ಪತ್ರ ಆಗುತ್ತದೆ ಎಂದರೆ ಸರಿ. ನಿಡಿ-1 ಕ್ರಯ ಪತ್ರದ ಆಧಾರದ ಮೇರೆಗೆ ಕಮಲಮ್ಮರವರು ದಾವಾ ಶೆಡ್ಯೂಲ್ ಆಸ್ತಿಯ ಮಾಲೀಕರಾಗಿರುತ್ತಾರೆ ಎಂದರೆ ಸರಿ. ನಿಪಿ-20 ವಿಲ್ ನಾಮೆಯಲ್ಲಿ ದಿನಾಂಕ 07.02.2003 ಇದೆ ಎಂದರೆ ಸರಿ. ನಿಪಿ-20 ವಿಲ್ ನಾಮೆ ಮಾಡುವ ಸಮಯದಲ್ಲಿ ನನ್ನ ಅತ್ತೆ ಕಮಲಮ್ಮರವರು ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕರಾಗಿರಲಿಲ್ಲ ಎಂದರೆ ಸರಿ. ದಿನಾಂಕ 07.02.2003 ರಲ್ಲಿ ನನ್ನ ಅತ್ತೆಯವರು ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕರು

ಆಗಿರಲಿಲ್ಲ ಆದ ಕಾರಣ ವಿಲ್ ನಾಮೆ ಮಾಡಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ನನ್ನ ಮಾವನವರ ಆಸ್ತಿಯಾಗಿರುವ ಕಾರಣದಿಂದ ನನ್ನ ಅತ್ತೆ ವಿಲ್ ನಾಮೆ ಮಾಡಬಹುದು ಎಂದು ನುಡಿಯುತ್ತಾರೆ. ನಿಪಿ–20 ವಿಲ್ ನಾಮೆಗೆ ಯಾರೆಲ್ಲಾ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ನಿಪಿ–20 ವಿಲ್ ನಾಮೆಯಲ್ಲಿರುವ ಸಹಿ ನನ್ನ ಅತ್ತೆ ಕಮಲಮ್ಮರವರ ಸಹಿ ಆಗಿರುವುದಿಲ್ಲ ಎಂದರೆ ಸುಳ್ಳು. ನಿಪಿ–20 ವಿಲ್ ನಾಮೆಗೆ ನನ್ನ ಗಂಡನ ಅತ್ತೆಯವರ ಸಹಿಯನ್ನು ಮಾಡಿರುತ್ತಾರೆ ಎಂದರೆ ಸುಳ್ಳು. ನಿಪಿ–20 ವಿಲ್ ನಾಮೆಯನ್ನು ಎಲ್ಲಿ ಯಾರು ಬರೆದಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ನಿಪಿ–20 ವಿಲ್ ನಾಮೆಯನ್ನು ನನ್ನ ಅತ್ತೆ ಕಮಲಮ್ಮರವರು ಮಾಡಿರುವ ಬಗ್ಗೆ ನಮ್ಮಗಳಿಗೆ 2019–2020 ರಲ್ಲಿ ಗೊತ್ತಾಗಿರುತ್ತದೆ. ನನ್ನ ಅತ್ತೆ ಕಮಲಮ್ಮರವರ ಜೀವಿತ ಕಾಲದಲ್ಲಿ ನಿಪಿ–20 ನ್ನು ಬರೆದಿರುವ ಬಗ್ಗೆ ನನಗೆ ಗೊತ್ತಿರಲಿಲ್ಲ. ಈ ದಿನದವರೆಗೂ ಕೂಡ ಕಮಲಮ್ಮರವರ 6 ಜನ ಹೆಣ್ಣು ಮಕ್ಕಳು ನಿಪಿ–20 ವಿಲ್ ನಾಮೆಯನ್ನು ಪ್ರಶ್ನಿಸಿರುವುದಿಲ್ಲ. ಅದೇ ರೀತಿ ಕಮಲಮ್ಮರವರ ಇನ್ನೊಬ್ಬ ಮಗ ಕೂಡ ನಿಪಿ–20 ವಿಲ್ ನಾಮೆಯನ್ನು ಪ್ರಶ್ನಿಸಿರುವುದಿಲ್ಲ. ನಿಪಿ–1 ಹಕ್ಕು ಬಿಡುಗಡೆ ಪತ್ರವನ್ನು ಕಮಲಮ್ಮರವರ ಇನ್ನೊಬ್ಬ ಮಗನಾದ ಮಂಜುನಾಥರವರು ಯಾವ ಉದ್ದೇಶಕ್ಕಾಗಿ ನನ್ನ ಗಂಡನ ಹೆಸರಿಗೆ ಮಾಡಿ ಕೊಟ್ಟಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿದ್ದೆ. ಸಾಕ್ಷಿ ಮುಂದುವರೆದು ಮುಂದೆ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ತಕರಾರು ಬರಬಾರದು ಎನ್ನುವ ಉದ್ದೇಶದಿಂದ ನಿಪಿ–1 ನ್ನು ಮಾಡಿಕೊಟ್ಟಿರುತ್ತಾರೆ.

4. ನನ್ನ ಗಂಡ ಮೊದಲನೇ ಸೆಮ್ ಬಿ.ಇ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ಗಂಡನ ಸಹಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನಿಪಿ–1 ದಾಖಲೆಯಲ್ಲಿ ಇರುವ ಸಹಿ ನನ್ನ ಗಂಡನ ಸಹಿ ಆಗಿರುತ್ತದೆ. ಸಾಕ್ಷಿಗೆ ದಿನಾಂಕ 23.11.2006 ಕ್ಕೆ ಸಂಬಂಧಿಸಿದ ಜಿ.ಪಿ.ಎ. ಯನ್ನು ತೋರಿಸಿದ್ದು ಅದನ್ನು ನೋಡಿ ತನ್ನ ಗಂಡನ ಸಹಿ ಮತ್ತು ಮಂಜುನಾಥ್ ರವರ ಸಹಿ ಇದೆಯೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿನಾಂಕ 09.11.2006 ಕ್ಕೆ ಸಂಬಂಧಿಸಿದ ಒಪ್ಪಂದ ಕರಾರು ಪತ್ರವನ್ನು ತೋರಿಸಿದ್ದು ಅದನ್ನು ನೋಡಿ ತನ್ನ ಗಂಡನ ಸಹಿ ಮತ್ತು ಮಂಜುನಾಥ್ ರವರ ಸಹಿ ಇದೆಯೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿ.ಪಿ.ಎ. ನನ್ನ ಗಂಡ ಮತ್ತು ಮಂಜುನಾಥ್ ರವರು 2 ನೇ ಪ್ರತಿವಾದಿಯವರಿಗೆ ಮಾಡಿಕೊಟ್ಟಿರುವಂತಹ ದಾಖಲೆ ಆಗಿರುತ್ತದೆ ಎಂದರ ಸುಳ್ಳು. ಅದೇ ರೀತಿ ಸದರಿ ಒಪ್ಪಂದ ಕರಾರು ನನ್ನ ಗಂಡ ಮತ್ತು ಮಂಜುನಾಥ್ ರವರು ವಿಜಯ್ ಕುಮಾರ್ ಎಂಬುವವರಿಗೆ ಮಾಡಿಕೊಟ್ಟಿರುವಂತಹ ಒಪ್ಪಂದ ಕರಾರು ಆಗಿರುತ್ತದೆ ಎಂದರೆ ಸುಳ್ಳು.

5. ನನ್ನ ಗಂಡ ಮತ್ತು ಅತ್ತೆಯವರು ಯಾವ ಇಸವಿಯಂದು ಕಾರ್ಖಾನೆ ಮುಕ್ತಾಯ ಮಾಡಿರುತ್ತಾರೆ ಎಂದು ಹೇಳಲು ನಿಖರವಾಗಿ ನನಗೆ ಗೊತ್ತಿಲ್ಲ. ನನ್ನ ಅತ್ತೆಯವರು ಮೃತ ಪಡುವ ಸಮಯದಲ್ಲಿ ಕಾರ್ಖಾನೆ ಇರಲಿಲ್ಲ. ಅದೇ ರೀತಿ ನನ್ನ ಅತ್ತೆಯವರ ಮೃತ ಪಡುವ 5 ವರ್ಷದ ಮೊದಲು ಕಾರ್ಖಾನೆ ಮುಕ್ತಾಯ ಆಗಿರುತ್ತದೆ. ಸದರಿ ಕಾರ್ಖಾನೆಯನ್ನು ಮುಚ್ಚಿದ ನಂತರದಲ್ಲಿ ನಾವು ರವಿ ಎಂಬುವವರಿಗೆ ಬಾಡಿಗೆಗೆ ಕೊಟ್ಟಿದ್ದೇವು. ಬೆಮಲ್ ನಿಂದ ಯಾವುದೇ ಆರ್ಡರ್ಸ್ ಬರದೇ ಇದ್ದ ಕಾರಣದಿಂದ ನಾವು ಕಾರ್ಖಾನೆಯನ್ನು ಮುಚ್ಚಿರುತ್ತೇವೆ. ನಾವು ರವಿ ಎಂಬುವವರಿಗೆ ಬಾಯಿ ಮಾತಿನ ಮುಖಾಂತರ ದಾವಾ ಶೆಡ್ಯೂಲ್ ಆಸ್ತಿಯನ್ನು ಬಾಡಿಗೆಗೆ ಕೊಟ್ಟಿದ್ದೇವು. ಸದರಿ ರವಿಯವರು ಯಾವ ಕಾರ್ಖಾನೆಯನ್ನು ನಡೆಸುತ್ತಿದ್ದರು ಎಂದು ಹೇಳಲು ನನಗೆ ಗೊತ್ತಿಲ್ಲ. ಅದೇ ರೀತಿ ಸದರಿಯವರು ಕಾರ್ಖಾನೆಯನ್ನು ಖಾಲಿ ಮಾಡಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ಸದರಿ ರವಿ ಎಂಬುವವರಿಗೆ ದಾವಾ ಶೆಡ್ಯೂಲ್ ಆಸ್ತಿಯನ್ನು ತಿಂಗಳಿಗೆ ರೂ.10,000/–ಗಳನ್ನು ಬಾಡಿಗೆಗೆ ಕೊಟ್ಟಿದ್ದರು. ಸದರಿ ರವಿ ಎಂಬುವವರು ಎಷ್ಟು ತಿಂಗಳ ಬಾಡಿಗೆಯನ್ನು ಬಾಕಿ ಇದ್ದರು ಎಂದು ಹೇಳಲು ನನಗೆ ಗೊತ್ತಿಲ್ಲ. ಸದರಿ ರವಿ ಎಂಬುವವರು ದಾವಾ ಶೆಡ್ಯೂಲ್ ಆಸ್ತಿಯ ಬಾಡಿಗೆಯನ್ನು ಕೊಡದೇ ಇದ್ದ ಸಮಯದಲ್ಲಿ ನಾವು ದಾವಾ ಶೆಡ್ಯೂಲ್ ಆಸ್ತಿಯ ಬಳಿ ಹೋಗಿದ್ದೇವು ಆ ಸಮಯದಲ್ಲಿ 1 ನೇ ಪ್ರತಿವಾದಿಯವರು ಇದ್ದರು. ನನ್ನ ಗಂಡ 1 ನೇ ಪ್ರತಿವಾದಿಯವರನ್ನು ಶೆಡ್ಡಿನಲ್ಲಿ ಇರುವ ಬಗ್ಗೆ ಪ್ರಶ್ನಿಸಿದ್ದಾಗ ಸದರಿಯವರು ಶೆಡ್ ತಮಗೆ ಸೇರಿದ ಶೆಡ್ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್